ಕಳಿಸಬೇಕು. ಸೂಸಿ ಬಂದ ದ್ರಾವಣವನ್ನು ಬೆಳೆಗಳಿಗೆ ಪೋಷಕಾಂಶವಾಗಿ ನೀರಿನ ಜೊತೆಗೆ ಹರಿ ಬಿಡಬೇಕು. ಅಥವಾ ಸಿಂಪರಣೆ ಮಾಡಬೇಕು. ಪೋಷಕಾಂಶಗಳಲ್ಲದೆ ಉಪಯುಕ್ತ ಸೂಕ್ಷ್ಮಾಣುಜೀವಿಗಳು ಭೂಮಿಗೆ ಸೇರಿದಂತಾಗಿ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಶೇಕಡಾ ೫ ರ ಪ್ರಮಾಣದಲ್ಲಿ ಬೆಳೆಯ ಮೇಲೆ ಸಿಂಪಡಿಸುವುದರಿಂದ ಕೀಟ, ರೋಗಗಳ ನಿರ್ವಹಣೆ ಮಾಡಬಹುದು.

**ಎರೆ ಜಲ,** ಸಸ್ಯ ಜನ್ಯ ಹಾಗೂ ಪ್ರಾಣಿ ಜನ್ಯ **ಸಸ್ಯ ಪ್ರಚೋದಕಗಳನ್ನು** ಸಹ ಬಳಸುವುದರಿಂದ ಉತ್ತಮ ಫಸಲು ಪಡೆಯಬಹುದು.

ಸಾವಯವ ಗೊಬ್ಬರದಿಂದ ಜೀವ ವೈವಿಧ್ಯತೆ ವೃದ್ಧಿಯಾಗಿ ಮಣ್ಣು ಜೀವಂತವಾಗಿ ಬೆಳೆಗೆ ಒಂದು ಅವ್ಯಕ್ತ ಶಕ್ತಿಯನ್ನು ಕೊಟ್ಟು ಅವುಗಳ ಸೇವನೆಯಿಂದ ದೇಹ ಮತ್ತು ಮನಸ್ಸಿನ ಆರೋಗ್ಯ ವೃದ್ಧಿಸುವುದೆಂಬ ನಂಬಿಕೆ ಕೂಡಾ ಜನರಲ್ಲಿ ಇದೆ. ಸಾವಯವ ಗೊಬ್ಬರಗಳು ಮಣ್ಣನ್ನು ಜೀವಂತಗೊಳಿಸುತ್ತವೆ ಹಾಗೂ ಉಪಯುಕ್ತ ಸೂಕ್ಷ್ಮಾಣುಜೀವಿಗಳ ಮತ್ತು ಇತರೆ ಜೀವಜಂತುಗಳ ಸಂಖ್ಯೆ ವೃದ್ಧಿಯಾಗುತ್ತದೆ.

ಎರೆಹುಳುಗಳು ಹಾಗೂ ಇತರೆ ಜೀವಜಂತುಗಳು ಮಣ್ಣಿನ ಕಣ ರಚನೆ ಉತ್ತಮವಾಗಿಸಿ, ಭೌತಿಕ ಗುಣಗಳನ್ನು ಉತ್ತಮಪಡಿಸಲು ಸಹಾಯಕಾರಿಯಾಗುವವು. ಮಣ್ಣಿನ ರಂಧ್ರಗಳ ಸಂಖ್ಯೆ ಅಧಿಕಗೊಂಡು ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹಾಗೂ ಹವೆಯಾಡುವಿಕೆ ಹೆಚ್ಚಾಗುತ್ತದೆ. ಸಾರಜನಕ ಸ್ಥಿರೀಕರಿಸುವ ಹಾಗೂ ರಂಜಕ ಕರಗಿಸುವ ಕ್ರಿಯೆಗೆ ಸಾವಯವ ಗೊಬ್ಬರಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಸಾವಯವ ಗೊಬ್ಬರದ ಕೆಲವೊಂದು ಘಟಕಗಳು ಸಸ್ಯಗಳ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವವು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು,
ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರ, ಕಂಕನಾಡಿ (ದ.ಕ.) ಮಂಗಳೂರು
**ದೂ:** 0824 2431872



**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ಭಾ.ಕೃ.ಅ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002**

# ಜೈವಿಕ ಹಾಗೂ ದ್ರವರೂಪದ ಸಾವಯವ ಗೊಬ್ಬರಗಳು

**ತಾಂತ್ರಿಕ ಮಾಹಿತಿ:**

**ಮಲ್ಲಿಕಾರ್ಜುನ ಎಲ್., ರಮೇಶ ಟಿ. ಜೆ.**

## ಜೈವಿಕ ಗೊಬ್ಬರಗಳು

ಜೈವಿಕ ಗೊಬ್ಬರಗಳು ಸೂಕ್ಷ್ಮ ಜೀವಾಣುಗಳನ್ನು ಹೊಂದಿದ ಪದಾರ್ಥಗಳಾಗಿದ್ದು, ರಾಸಾಯನಿಕ ಗೊಬ್ಬರವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಕಡಿಮೆ ಮಾಡಲು ಸಹಾಯವಾಗಿರುತ್ತವೆ. ಅಲ್ಲದೆ ಈ ಸೂಕ್ಷ್ಮ ಜೀವಾಣುಗಳು ಅನೇಕ ತರಹದ ಬೆಳೆ ಪ್ರಚೋಧನಾ ವಸ್ತುಗಳನ್ನು ಉತ್ಪಾದಿಸಿ ಬೆಳೆಗೆ ಒದಗಿಸುತ್ತವೆ.

**ಪ್ರಮುಖ ಜೈವಿಕ ಗೊಬ್ಬರಗಳು:**

- **ಸಾರಜನಕ ಸ್ಥಿರೀಕರಿಸುವ ಜೈವಿಕ ಗೊಬ್ಬರಗಳು**

  ೧. ರೈಝೋಬಿಯಂ (ಪ್ರತಿ ಎಕರೆಗೆ ಪ್ರತಿ ಹಂಗಾಮಿಗೆ ಕನಿಷ್ಠ ೧೦–೧೨ ಕಿ.ಗ್ರಾಂ., ಗರಿಷ್ಠ ೪೦–೬೦ ಕಿ.ಗ್ರಾಂ. ಸಾರಜನಕ ನಂತರ ಬೆಳೆಯುವ ಬೆಳೆಗಳಿಗೆ ೮–೧೦ ಕಿ.ಗ್ರಾಂ. ಸಾರಜನಕ ಸಿಗುತ್ತದೆ.)

  ೨. ಅಝೋಸ್ಪೈರಿಲಂ

  ೩. ಅಝುಟೋಬ್ಯಾಕ್ಟರ್

  ೪. ಹಸಿರು ನೀಲಿ ಪಾಚಿ

  ೫. ಅಝೋಲ್ಲಾ

  ೬. ಫ್ರಾಂಕಿಯಾ

  ೭. ಅಝೋರೈಝೋಬಿಯಂ

೮. ಅಸಿಟೋಬ್ಯಾಕ್ಟರ ಡೈಅಝೋಟ್ರೋಫಿಕಸ್ (ವಿಶೇಷವಾಗಿ ಕಬ್ಬಿನ ಬೆಳೆಗೆ ಅತೀ ಸೂಕ್ತವಾದಂತಹ ಸಾರಜನಕ ಸ್ಥಿರೀಕರಿಸುವ ಜೈವಿಕಗೊಬ್ಬರ)

- **ರಂಜಕ ಒದಗಿಸುವ ಜೈವಿಕ ಗೊಬ್ಬರಗಳು**

೧. ಬ್ಯಾಕ್ಟೀರಿಯಾ : ಬ್ಯಾಸಿಲಸ್ ಮೆಗಟೆರಿಯಂ, ಬ್ಯಾಸಿಲಸ್ ಪಾಲಿಮಿಕ್ಸಾ, ಸುಡೊಮೊನಾಸ್ ಸ್ಟ್ರೈಯೆಟಾ

೨. ಶಿಲೀಂಧ್ರ : ಪೆನಿಸಿಲಿಯಂ ಬಲಾಜಿ, ಅಸ್ಪರಿಜಿಲಸ್ ಅವಮೋರಿ

೩. ಮೈಕೊರೈಝಾ

- **ಇತರೆ ಜೈವಿಕ ಗೊಬ್ಬರಗಳು**

೧. ಪೊಟ್ಯಾಷ್ ಕರಗಿಸುವ ಜೈವಿಕ ಗೊಬ್ಬರಗಳು

೨. ಜಿಂಕ್ (ಸತು) ಒದಗಿಸುವ ಜೈವಿಕ ಗೊಬ್ಬರಗಳು

೩. ಬೆಳೆ ಪ್ರಚೋಧನಾ ವಸ್ತುಗಳನ್ನು ಮತ್ತು ರೋಗ ನಿರೋಧಕ ಶಕ್ತಿಯನ್ನು ಒದಗಿಸಬಲ್ಲ ಜೈವಿಕ ಗೊಬ್ಬರಗಳು

**ಜೈವಿಕ ಗೊಬ್ಬರಗಳನ್ನು ಉಪಯೋಗಿಸುವ ವಿಧಾನ**

**೧. ಬೀಜೋಪಚಾರ:**

ಪ್ರತಿ ಎಕರೆಗೆ ಬೀಜದ ಪ್ರಮಾಣ ೧೦ ಕಿ. ಗ್ರಾಂ. ಗಿಂತ ಕಡಿಮೆ ಇದ್ದಲ್ಲಿ ೫೦೦ ಗ್ರಾಂ., ೧೦-೨೦ ಕಿ. ಗ್ರಾಂ. ಇದ್ದಲ್ಲಿ ೭೫೦ ಗ್ರಾಂ., ೨೦ ಕಿ. ಗ್ರಾಂ. ಗಿಂತ ಹೆಚ್ಚು ಇದ್ದಲ್ಲಿ ೧ ಕಿ. ಗ್ರಾಂ. ಜೈವಿಕ ಗೊಬ್ಬರ ಉಪಚರಿಸಬೇಕು.

**೨. ಸಸಿಮಡಿ ಉಪಚಾರ:**

ಜೈವಿಕ ಗೊಬ್ಬರವನ್ನು ೫ ಕಿ. ಗ್ರಾಂ. ೧೦ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ (ಪ್ರತಿ ಎಕರೆ ಸಸಿಮಡಿ) ನಾಟಿ ಮಾಡುವ ಮೊದಲು ಸಸಿಗಳ ಬೇರುಗಳನ್ನು ೨೫ ನಿಮಿಷ ಈ ದ್ರಾವಣದಲ್ಲಿ ನೆನೆಯಿಡಬೇಕು.



೫೦ ಲೀ ನೀರಿನ ಡ್ರಮ್‌ನಲ್ಲಿ ಒಂದು ರಾತ್ರಿ ತೂಗಿ ಹಾಕಿ ಇಡುವುದು. ಮಾರನೆದಿನ ಬಟ್ಟೆಯನ್ನು ನೀರಿನಲ್ಲಿ ಅದ್ದಿಅದ್ದಿ ತೆಗೆಯುವುದು ಹಾಗೂ ಸಗಣೆಯನ್ನು ಹಿಂಡಿ ಇದಕ್ಕೆ ೫ ಲೀ. ಗೋಮೂತ್ರವನ್ನು ಬೆರಸಬೇಕು. ಅದೇ ರಾತ್ರಿ ಪ್ರತ್ಯೇಕವಾಗಿ ೫೦ ಗ್ರಾಂ ಸುಣ್ಣವನ್ನು ಒಂದು ಲೀ ನೀರಿನಲ್ಲಿ ಬೆರೆಸಿ ದ್ರಾವಣ ತಯಾರು ಮಾಡಿಕೊಳ್ಳಬೇಕು. ಇದನ್ನು ಮೊದಲೇ ಸಗಣಿ ಮತ್ತು ಗೋಮೂತ್ರದಿಂದ ತಯಾರಿಸಿದ ದ್ರಾವಣಕ್ಕೆ ಬೆರೆಸಬೇಕು. ಬೀಜವನ್ನು ಅಥವಾ ಸಸ್ಯ ತುಂಡುಗಳನ್ನು ಒಂದು ನಿಮಿಷ ಬೀಜಾಮೃತದಲ್ಲಿ ಅದ್ದಿ ತೆಗೆದು ಬಿತ್ತನೆಗೆ ಉಪಯೋಗಿಸುವುದು. ಇದಲ್ಲದೆ ಸಾವಯವ ಕೃಷಿಕರು ವಿವಿಧ ಬೆಳೆಗಳಲ್ಲಿ ಪೋಷಕಾಂಶಗಳ ಪೂರೈಕೆಗೆ ಹಾಗೂ ಉತ್ತಮ ಬೆಳವಣಿಗೆಗೆ, ಗಂಜಲ, ಜೀವಾಮೃತ, ಬೀಜಾಮೃತ, ಸಸ್ಯಾಮೃತ, ಅಮೃತಪಾನಿ, ನಂದಿನಿ, ತೆಂಗಿನ ಎಳೆನೀರು, ಹಾಲು, ಮಜ್ಜಿಗೆ ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದಾರೆ. ಇದರಿಂದ ಉತ್ತಮ ಫಲಿತಾಂಶ ಪಡೆಯಬಹುದು.

**ಜೀವಸಾರ (ಬಯೋ ಡೈಜೆಸ್ಟರ್):**

ಜೀವಸಾರ ಉತ್ಪಾದನಾ ಘಟಕದಿಂದ ದೊರಕುವ ಸಾರವು ಬೆಳೆಗಳಿಗೆ ಅಮೂಲ್ಯವಾದ ಆಹಾರಾಂಶಗಳನ್ನು ನೀಡುವುದರ ಜೊತೆಗೆ ಹಲವು ರೋಗನಿರೋಧಕ/ನಿಯಂತ್ರಕ ಗುಣಗಳನ್ನು ತೋರ್ಪಡಿಸುವ ಕಾರಣ, ಇದನ್ನು ಸ್ಥಾಪಿಸಲು ಶಿಫಾರಸ್ಸು ಮಾಡಲಾಗಿದೆ. ಬಯೋ ಡೈಜೆಸ್ಟರ್ ಘಟಕಕ್ಕೆ ಸಹಾಯಧನ ಪಡೆಯಲು ಬಯಸುವ ಫಲಾನುಭವಿಗಳು ಹಸು, ಎಮ್ಮೆ, ಕುರಿ, ಮೇಕೆ ಇವುಗಳಲ್ಲಿ ಕನಿಷ್ಟ ಯಾವುದಾದರೊಂದನ್ನು ಹೊಂದಿರಬೇಕು.

ಪ್ರತಿ ಫಲಾನುಭವಿಗೆ ಈ ಘಟಕದ ನಿರ್ಮಾಣಕ್ಕೆ ತಗಲುವ ಒಟ್ಟು ಖರ್ಚಿನ ಶೇ. ೫೦ ರಷ್ಟು ಅಥವಾ ಗರಿಷ್ಠ ರೂ. ೩೦,೦೦೦/-ಗಳಿಗೆ ಮಿತಿಗೊಳಿಸಿ ಸಹಾಯಧನ ನೀಡುವುದು.

ಗಾತ್ರ : ೧೬ ಮೀ x ೧೦ ಮೀ x ೬ ಮೀ ಔಷಧೀಯ ಗುಣಧರ್ಮ ಹೊಂದಿದ ಲಕ್ಕಿ, ಎಕ್ಕೆ, ಅಡಸಾಲ, ಬೇವು, ಸೀತಾಫಲ, ಬಜ್ಜೆ, ಚದುರಂಗ, ಕಿತ್ತಳೆ, ಹೊಂಗೆ, ಕಣಗಿಲ ಅಥವಾ ಇತರೆ ಕಳೆಗಳನ್ನು ಸಗಣಿ ಮತ್ತು ಗಂಜಲದ ಜೊತೆಗೆ ಸಾಕಷ್ಟು ನೀರು ಸೇರಿಸಿ ಬಯೋಡೈಜೆಸ್ಟರ್‌ದಲ್ಲಿ ಹಾಕಿ ಮಿಶ್ರಣ ಮಾಡಬೇಕು. ೧೦-೧೫ ದಿವಸಗಳ ವರೆಗೆ

**ಉಪಯೋಗಗಳು:**

ವಿವಿಧ ಬೆಳೆಗಳಿಗೆ ಸಸ್ಯ ಪ್ರಚೋಧಕದಂತೆ, ಹೂ, ಫಸಲು ಹೆಚ್ಚಿಸುವಲ್ಲಿ ಪಂಚಗವ್ಯ ಬಹಳ ಪರಿಣಾಮಕಾರಿ. ಬೆಳೆಗಳಿಗೆ ಪೋಷಕಾಂಶ ಒದಗಿಸುತ್ತದೆ. ಬೆಳೆಗಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಎಲ್ಲಾ ತರಕಾರಿಗಳಿಗೆ, ಹೂವಿನ ಬೆಳೆಗಳಿಗೆ, ಹಣ್ಣಿನ ಬೆಳೆಗಳಿಗೆ, ಹತ್ತಿ, ಮೆಣಸಿನ ಕಾಯಿ, ಶೇಂಗಾ, ಸೋಯಾ ಅವರೆ, ಆಲೂಗಡ್ಡೆ, ಅರಿಶಿಣ, ಬಾಳೆ, ಕಬ್ಬು, ಭತ್ತ, ಗೋಧಿ, ಕಾಳು ಮೆಣಸು, ಇತ್ಯಾದಿ ಬೆಳೆಗಳಲ್ಲಿ ಹೆಚ್ಚು ಪ್ರಯೋಜನಕಾರಿ ಎಂದು ಕಂಡುಬಂದಿದೆ.

**ಜೀವಾಮೃತ :**

ಜೀವಾಮೃತ ಬಹುಮುಖಿ ಉಪಯುಕ್ತ ದ್ರವರೂಪದ ಗೊಬ್ಬರವಾಗಿರುತ್ತದೆ. ಇದನ್ನು ರೈತರು ತಮ್ಮ ಕ್ಷೇತ್ರದಲ್ಲಿ ತಯಾರು ಮಾಡಿ ಉಪಯೋಗಿಸಬಹುದಾಗಿದೆ. ಇದರ ತಯಾರಿಕೆಯಲ್ಲಿ ಸ್ಥಳೀಯವಾಗಿ ಕ್ಷೇತ್ರದಲ್ಲಿ ಸಿಗುವ ಆಕಳ ಗಂಜಲ, ಸಗಣಿ, ದ್ವಿದಳ ಧಾನ್ಯದ ಹಿಟ್ಟು, ಬೆಲ್ಲ ಮತ್ತು ಮಣ್ಣು ಅವಶ್ಯವಿರುತ್ತವೆ. ಜೀವಾಮೃತ ತಯಾರಿಸಲು ೨೦೦ ಲೀ ನೀರಿಗೆ ೧೦ ಕಿ.ಗ್ರಾಂ. ಆಕಳ ಸಗಣಿ, ೧೦ ಲಿ. ಗೋಮೂತ್ರ, ೨ ಕಿ.ಗ್ರಾಂ. ಬೆಲ್ಲ, ೨ ಕಿ.ಗ್ರಾಂ. ದ್ವಿದಳ ಧ್ಯಾನ್ಯಗಳ ಹಿಟ್ಟು ಹಾಗೂ ೫೦೦ ಗ್ರಾಂ ನಷ್ಟು ಮಣ್ಣನ್ನು ಯಜ್ಞ ಗಿಡಗಳಾದ ಅರಳಿ, ಬನ್ನಿ, ಆಲದ ಗಿಡಗಳ ಬುಡದಿಂದ ಸಂಗ್ರಹಿಸಿ ಬಳಸಲಾಗುತ್ತದೆ ಇವುಗಳನ್ನು ಸೇರಿಸಿ ತಯಾರಿಸಿದ ಮಿಶ್ರಣವನ್ನು ಒಂದು ವಾರದವರೆಗೆ ದಿನಕ್ಕೆ ಎರಡು ಮೂರು ಸಲ ಕೋಲಿನಿಂದ ತಿರುಗಿಸಿ ಕೊಳೆಯಲು ಬಿಡಬೇಕು. ಒಂದು ವಾರದ ನಂತರ ಇದನ್ನು ಸಸ್ಯ ಪೋಷಕಾಂಶವಾಗಿ ಒದಗಿಸಲು ಹಾಗೂ ಸಸ್ಯ ಪ್ರಚೋಧಕವಾಗಿ ವಿವಿಧ ಬೆಳೆಗಳಿಗೆ ಬಿತ್ತುವ ಸಮಯದಲ್ಲಿ ಮಣ್ಣಿನ ಮೇಲೆ ಸಿಂಪಡಿಸಲು ಉಪಯೋಗಿಸಬಹುದಾಗಿದೆ. ಇದಲ್ಲದೆ ನೀರಿನೊಂದಿಗೆ ಬೆಳೆಗಳಿಗೆ ಒದಗಿಸಬಹುದು. ಬೆಳೆಗಳಿಗೆ ಸಿಂಪರಣೆ ಮಾಡಲು ದ್ರಾವಣ ತಯಾರು ಮಾಡಿ ಪ್ರತಿ ಎಕರೆಗೆ ೨೦೦ ಲೀ ಪ್ರಮಾಣದಲ್ಲಿ ಉಪಯೋಗಿಸಬಹುದು.

**ಬೀಜಾಮೃತ**

ಬೀಜಾಮೃತ ಒಂದು ಪರಿಣಾಮಕಾರಿ ದ್ರವರೂಪದ ಗೊಬ್ಬರವಾಗಿರುತ್ತದೆ. ಇದು ಶೂನ್ಯ ಬಂಡವಾಳ ಕೃಷಿಯಲ್ಲಿ ಬಳಕೆಯಾಗುವ ಒಂದು ಮುಖ್ಯ ಪರಿಕರವಾಗಿರತ್ತದೆ. ಈ ದ್ರಾವಣ ತಯಾರಿಸಲು ೫ ಕೆಜಿ ಆಕಳ ಸಗಣೆಯನ್ನು ತಿಳಿಯಾದ ಬಟ್ಟೆಯಲ್ಲಿ ಕಟ್ಟಿ



**೩. ಕ್ಷೇತ್ರಕ್ಕೆ ಉಪಯೋಗಿಸುವ ವಿಧಾನ:**

ನೇರವಾಗಿ ಕ್ಷೇತ್ರಕ್ಕೆ ಬಳಕೆ ಮಾಡಬೇಕಾದಲ್ಲಿ ೮ ಕಿ. ಗ್ರಾಂ. ಜೈವಿಕ ಗೊಬ್ಬರವನ್ನು ೨೦೦ ಕಿ. ಗ್ರಾಂ. ಕಾಂಪೋಸ್ಟ್‌ನೊಂದಿಗೆ ಬೆರೆಸಿ ಸಾಲಿನಲ್ಲಿ ಉಪಚರಿಸಬಹುದು

**ಅಝೋಲ್ಲಾ ಬಳಕೆ**

ಪ್ರತಿ ಎಕರೆಗೆ ೪ ರಿಂದ ೫ ಟನ್ ಅಝೋಲ್ಲಾ ಗೊಬ್ಬರವನ್ನು ಭತ್ತ ನಾಟಿ ಮಾಡಿದ ಒಂದು ವಾರದ ನಂತರ ಹಾಕಬೇಕು. ಇದರ ಜೊತೆ ಎಕರೆಗೆ ೪ ಕೆ.ಜಿ ಸೂಪರ್ ಫಾಸ್ಫೇಟ್ ಹಾಕಬೇಕಾಗುತ್ತದೆ. ೨ ರಿಂದ ೫ ಕ್ವಿಂಟಲ್ ಬೆಳೆಯುತ್ತಿರುವ ಅಝೋಲ್ಲಾವನ್ನು ಪ್ರತಿ ಎಕರೆಯಂತೆ, ನಾಟಿ ಮಾಡುವುದಕ್ಕಿಂತ ಒಂದು ವಾರ ಮುಂಚಿತವಾಗಿ ಹರಡಬೇಕು. ಒಂದು ವಾರದಲ್ಲಿ ದ್ವಿಗುಣ ಅಂದರೆ ಎರಡು ಪಟ್ಟು ಬೆಳೆದಿರುತ್ತದೆ. ಪ್ರತಿ ಎಕರೆಗೆ ೧೨ ರಿಂದ ೨೦ ಕೆಜಿ ಸಾರಜನಕವನ್ನು ಒದಗಿಸುತ್ತದೆ. ಅಝೋಲ್ಲಾ ಉಪಯೋಗಿಸಿದಾಗ ಗದ್ದೆಯಲ್ಲಿ ೧೦ ರಿಂದ ೧೫ ಸೆಂ. ಮೀಟರ್‌ನಷ್ಟು ನೀರು ಇರಬೇಕು.

**ದ್ರವರೂಪದ ಸಾವಯವ ಗೊಬ್ಬರಗಳು**

**ಪಂಚಗವ್ಯ ತಯಾರಿಸುವ ವಿಧಾನ:**

ಆಕಳ ಸಗಣಿ (೭ ಕಿ.ಗ್ರಾಂ.) + ಆಕಳ ತುಪ್ಪ (೧ ಕಿ. ಗ್ರಾಂ.) ೨ ದಿವಸಗಳ ನಂತರ ಮಿಶ್ರಮಾಡುವುದು, ಗೋಮೂತ್ರ (೩ ಲೀ.) + ನೀರು (೧೦ ಲೀ.) ೧೫ ದಿವಸಗಳ ನಂತರ ಮಿಶ್ರಮಾಡುವುದು ಕಬ್ಬಿನ ಹಾಲು (೩ ಲೀ.) + ಆಕಳ ಹಾಲು (೨ ಲೀ.) + ಆಕಳ ಹಾಲಿನ ಮೊಸರು (೨ಲೀ.) + ತೆಂಗಿನ ನೀರು (ಎಳೆ ನೀರು) (೨ ಲೀ.)/ ಈಸ್ಟ (೧೦೦ ಗ್ರಾಂ.) + ಬೆಲ್ಲ (೨೫೦ ಗ್ರಾಂ.) + ೧೨ ಕಳಿತ ಬಾಳೆಹಣ್ಣು ಹೀಗೆ ತಯಾರಿಸಿದ ದ್ರಾವಣವನ್ನು ಸೋಸಿ ೨ ವಾರಗಳ ನಂತರ ಸಿಂಪರಣೆಗೆ ಉಪಯೋಗಿಸಬೇಕು.

**ಬಳಸುವ ಪ್ರಮಾಣ:**

ಶೇಕಡಾ ೨ರ ದ್ರಾವಣವನ್ನು ಪ್ರತಿ ಎಕರೆಗೆ ೨೦೦ ರಿಂದ ೨೫೦ ಲೀ. ನೀರಿನಲ್ಲಿ ಬೆರೆಸಿ ಸಿಂಪರಿಸಿ. ಹೂ ಬಿಡುವ ಸಮಯ ಮತ್ತು ೧೫ ದಿವಸಗಳ ನಂತರ ೨ ಸಾರಿ ಸಿಂಪರಣೆ ಮಾಡಬೇಕು. ನೀರಾವರಿ ಬೆಳೆಗಳಿಗೆ ಎಕರೆಗೆ ೨೦ ಲೀ. ಪಂಚಗವ್ಯ ದ್ರಾವಣವನ್ನು ಹೂ ಬಿಡುವ ಸಮಯದಲ್ಲಿ ನೀರಿನ ಜೊತೆಗೆ ಕೊಡಬೇಕು.